**ಸಿ.ಸಿ. 710/2021, ಪಿ.ಡಬ್ಲೂ-5 ಹೆಸರುಃ ಮನೋಹರ**

**ದಿಃ27-02-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : 4 ನೇ ಆರೋಪಿ ಪರ ಶ್ರೀ ಡಿ.ಎಂ.ಬಿ. ವಕೀಲರಿಂದಃ**

ಪ್ರತಿದಿನ ನಮ್ಮ ಠಾಣೆಯಲ್ಲಿ ಬೆಳಗ್ಗೆ ಸಮಯದಲ್ಲಿ ಕರ್ತವ್ಯ ನಿಯೋಜನೆಯ ಕುರಿತು ರೋಲ್‌ಕಾಲ್ ಪದ್ದತಿ ಇದೆ ಎಂದರೆ ಸರಿ. ಸದರಿ ಸಮಯದಲ್ಲಿ ಪೆಟ್ರೋಲಿಂಗ್ ಕರ್ತವ್ಯಕ್ಕೆ ಹೋಗುವ ಬಗ್ಗೆ ನಮೂದು ಮಾಡುತ್ತಾರೆ ಎಂದರೆ ಸಾಕ್ಷಿ ಕೆಲವೊಮ್ಮೆ ಮಾಡುತ್ತಾರೆ, ಕೆಲವೊಮ್ಮೆ ಮಾಡುವುದಿಲ್ಲ ಎಂದು ಹೇಳುತ್ತಾರೆ. ಸದರಿ ದಿನದಂದು ನಮ್ಮ ಠಾಣಾ ವ್ಯಾಪ್ತಿಯಲ್ಲಿ ಗಸ್ತು ಕರ್ತವ್ಯಕ್ಕೆ ನಿಯೋಜನೆಗೊಂಡಂತಹ ಸಿಬ್ಬಂಧಿಯ ಕುರಿತು ದಾಖಲಾತಿಯಲ್ಲಿ ನಮೂದು ಇರುತ್ತದೆ ಎಂದರೆ ಸರಿ. ನಮ್ಮ ಠಾಣೆಯಲ್ಲಿ ವಾಹನಗಳಿಗೆ ಸಂಬಂಧಿಸಿದಂತೆ ಲಾಗ್ ಪುಸ್ತಕವನ್ನು ಇಟ್ಟಿರುತ್ತೇವೆ ಎಂದರೆ ಸರಿ. ಸದರಿ ಪುಸ್ತಕದಲ್ಲಿ ನಮ್ಮ ಠಾಣಾ ಜೀಪು ಯಾವ ಸಮಯದಲ್ಲಿ ಠಾಣೆಯನ್ನು ಬಿಟ್ಟಿರುತ್ತದೆ ಮತ್ತು ಎಷ್ಟು

ಕಿ.ಮೀ. ವ್ಯಾಪ್ತಿಯಲ್ಲಿ ಕ್ರಮಿಸಿರುತ್ತದೆ ಹಾಗೂ ಯಾವ ಸಮಯದಲ್ಲಿ ನಮ್ಮ ಠಾಣೆಗೆ ಹಿಂತಿರುಗಿರುತ್ತದೆ ಎಂಬ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ.

2. ನಾವು ಹಿಂದಿನ ದಿನ ರಾತ್ರಿ 10 ಗಂಟೆಗೆ ಠಾಣೆ ಬಿಟ್ಟು ಬೇರೆ ಬೇರೆ ಊರುಗಳಲ್ಲಿ ಗಸ್ತು ಕರ್ತವ್ಯ ಮಾಡಿ ದಿನಾಂಕ 21.04.2020 ರಂದು ಬೆಳಗ್ಗೆ 5 ಗಂಟೆಯ ಸಮಯದಲ್ಲಿ ಶಿವಗಂಗ ಗ್ರಾಮದ ಬಳಿ ಬಂದಿರುತ್ತೇವೆ. ನಾವು ರಾತ್ರಿ ಗಸ್ತು ಮಾಡುವ ಸಮಯದಲ್ಲಿ ಗ್ರಾಮಸ್ಥರ ಸಹಿ ಪಡೆಯುವುದಿಲ್ಲ. ಬೆಳಗಿನ ಅವಧಿಯಲ್ಲಿ ಗ್ರಾಮ ಗಸ್ತು ಮಾಡುವ ಕಾಲಕ್ಕೆ ಗ್ರಾಮಸ್ಥರ ಸಹಿಯನ್ನು ಪಡೆದುಕೊಳ್ಳುತ್ತೇವೆ. ಸದರಿ ದಿನದಂದು ಕೋವಿಡ್-19 ಕಾರಣದಿಂದ ಲಾಕ್‌ಡೌನ್ ಇದ್ದ ಪರಿಣಾಮ ಯಾವುದೇ ವಾಹನಗಳು ಓಡಾಡುತ್ತಿರಲಿಲ್ಲ. ನಮ್ಮ ಠಾಣೆಯಲ್ಲಿ ಸಿ.ಸಿ. ಕ್ಯಾಮೆರಾ ಅಳವಡಿಸಿದ್ದಾರೆ ಎಂದರೆ ಸರಿ. ಘಟನೆ ನಡೆದ ಕಾಲಕ್ಕೆ ನಮ್ಮ ಠಾಣೆ ಹಳೆಯ ಪೊಲೀಸ್ ಠಾಣೆಯಾಗಿದ್ದು, ಹಾಗಾಗಿ 100 ಮೀಟರ್ ಅಂತರದವರೆಗೆ ಮಾತ್ರ ಸಿ.ಸಿ. ಕ್ಯಾಮೆರಾ ವ್ಯಾಪಿಸಿತ್ತು, ಆದ್ದರಿಂದ ಎನ್.ಹೆಚ್.13 ರ ರಸ್ತೆಯಲ್ಲಿನ ವಾಹನಗಳ ಓಡಾಡುವಿಕೆಯ ಕುರಿತು ಸಿ.ಸಿ. ಕ್ಯಾಮೆರಾದಲ್ಲಿ ದಾಖಲೆ ಆಗುತ್ತಿರಲಿಲ್ಲ. ಕೋವಿಡ್ 19 ಸಮಯದಲ್ಲಿ ಚಿತ್ರಹಳ್ಳಿ ಗೇಟಿನಲ್ಲಿ ಚೆಕ್‌ಪೋಸ್ಟ್‌ನ್ನು ಹಾಕಿರಲಿಲ್ಲ. ದೊಡ್ಡ ಉಳ್ಳಾರ್ತಿ ಗ್ರಾಮ ಚಳ್ಳಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ಕೋವಿಡ್ 19 ಸಮಯದಲ್ಲಿ ಪಟ್ಟಣ ಪ್ರದೇಶದಲ್ಲಿ ಚೆಕ್‌ಪೋಸ್ಟ್‌ನ್ನು ಅಳವಡಿಸಿದ್ದರು, ಅಂತೆಯೇ ಜಿಲ್ಲಾ ಗಡಿ ವ್ಯಾಪ್ತಿಯಲ್ಲಿ ಚೆಕ್‌ಪೋಸ್ಟ್‌ನ್ನು ಅಳವಡಿಸಿದ್ದರು. ದೊಡ್ಡ ಉಳ್ಳಾರ್ತಿ ಗ್ರಾಮದಿಂದ ಶಿವಗಂಗ ಗ್ರಾಮಕ್ಕೆ ಬರಲು ಚಿತ್ರದುರ್ಗ ಮಾರ್ಗವಾಗಿ ಬರಬೇಕು ಎಂದರೆ ಸರಿ. ಚೆಕ್‌ಪೋಸ್ಟ್‌ನಲ್ಲಿ ಎಲ್ಲಾ ವಾಹನಗಳನ್ನು ಪರಿಶೀಲಿಸಿ ಕಳುಹಿಸುತ್ತಾರೆ ಎಂದರೆ ಸರಿ. ಚೆಕ್‌ಪೋಸ್ಟ್‌ನಲ್ಲಿ ಯಾವ ಯಾವ ವಾಹನಗಳು ಹಾದುಹೋಗಿರುತ್ತವೆ ಎಂಬ ಬಗ್ಗೆ ಉಲ್ಲೇಖ ಇರುತ್ತದೆ ಎಂದರೆ ಸರಿ. ಕೋವಿಡ್ 19 ಸಮಯದಲ್ಲಿ ದಿನದ 24 ಗಂಟೆಯಲ್ಲೂ ಚೆಕ್‌ಪೋಸ್ಟ್ ಕಾರ್ಯನಿರ್ವಹಿಸುತ್ತಿತ್ತು ಎಂದರೆ ಸರಿ. ನಾವು ವಾಹನವನ್ನು ಪರಿಶೀಲನೆ ಮಾಡುವ ಪೂರ್ವದಲ್ಲಿ ಯಾವುದೇ ಚೆಕ್‌ಪೋಸ್ಟ್‌ನಿಂದ ನಮ್ಮ ಠಾಣೆಗೆ ಸದರಿ ವಾಹನದಲ್ಲಿ ಮದ್ಯ ಸಾಗಾಣಿಕೆ ಮಾಡುತ್ತಿದ್ದರು ಎಂಬ ಬಗ್ಗೆ ಯಾವುದೇ ವರದಿ ಬಂದಿರಲಿಲ್ಲ.

3. ನಿಪಿ.5 ಮತ್ತು 6 ರ ಛಾಯಾಚಿತ್ರಗಳಲ್ಲಿ ಆಂಬುಲೆನ್ಸ್‌ನಿಂದ ಓಮಿನಿ ಕಾರಿಗೆ ಮದ್ಯವನ್ನು ತುಂಬುತ್ತಿದ್ದ ಬಗ್ಗೆ ಯಾವುದೇ ಕುರುಹುಗಳು ಇಲ್ಲ. ವರದಿಯನ್ನು ಸ್ಥಳದಲ್ಲಿ ಚಾಸಾ.1 ರವರು ತಯಾರಿಸಿರುತ್ತಾರೆ. ನಿಪಿ.1 ರ ವರದಿಯನ್ನು ಠಾಣೆಗೆ ತಲುಪಿಸಲು ನಾನು ಸ್ವೀಕರಿಸಿದ ಬಗ್ಗೆ ನಿಪಿ.1 ರಲ್ಲಿ ನನ್ನ ಸ್ವೀಕೃತಿ ಹಿಂಬರಹದ ಕುರಿತಾಗಿ ಸಹಿ ಇಲ್ಲ. ನಿಪಿ.5 ಮತ್ತು 6 ರ ಛಾಯಾಚಿತ್ರಗಳಲ್ಲಿ ಆಂಬುಲೆನ್ಸ್‌ನಲ್ಲಿ 10 ಬಾಕ್ಸ್‌ಗಳು ಇದ್ದು, ಸದರಿ

ಬಾಕ್ಸ್‌ಗಳಲ್ಲಿ 180 ಎಂ.ಎಲ್.ನ 48 ಬ್ಯಾಗ್‌ಪೈಪರ್ ವಿಸ್ಕಿಯ ಪೌಚುಗಳು ಇರುವ ಬಗ್ಗೆ ಕುರುಹುಗಳು ಇಲ್ಲ, ಅಂತೆಯೇ ಓಮಿನಿ ವಾಹನದಲ್ಲಿ 4 ಬಾಕ್ಸುಗಳಲ್ಲಿ 180 ಎಂ.ಎಲ್.ನ 48 ಬ್ಯಾಗ್‌ಪೈಪರ್ ವಿಸ್ಕಿಯ ಪೌಚುಗಳು ಇರುವ ಬಗ್ಗೆ ಕುರುಹುಗಳು ಇಲ್ಲ.

4. ಮಹಜರಿನ ಸಮಯದಲ್ಲಿ ಸದರಿ ಬಾಕ್ಸ್‌ಗಳನ್ನು ತೆರೆದು ಪರಿಶೀಲನೆ ಮಾಡಿರುತ್ತೇವೆ. ನಿಪಿ.2 ರ ಮಹಜರಿನಲ್ಲಿ ಆಂಬುಲೆನ್ಸ್‌ನಲ್ಲಿ ಇದ್ದಂತಹ 10 ಬಾಕ್ಸ್‌ಗಳನ್ನು ಹಾಗೂ ಓಮಿನಿ ವಾಹನದಲ್ಲಿದ್ದಂತಹ 4 ಬಾಕ್ಸ್‌ಗಳನ್ನು ತೆರೆದು ಪರಿಶೀಲಿಸಿರುವ ಬಗ್ಗೆ ಉಲ್ಲೇಖ ಇಲ್ಲ. ನಿಪಿ.2 ರಲ್ಲಿ ಬಾಕ್ಸ್‌ಗಳ ಕುರಿತು ಮಾತ್ರ ಉಲ್ಲೇಖ ಇದೆ. ನಿಪಿ.2 ರ ಮಹಜರಿನಲ್ಲಿ ಒಟ್ಟು 14 ಬಾಕ್ಸ್‌ಗಳಲ್ಲಿ ಇದ್ದ ಎಲ್ಲಾ ಮಧ್ಯದ ಪೌಚುಗಳನ್ನು ತೆಗೆದು ಪರಿಶೀಲನೆ ಮಾಡಿ ನಂತರ ಅಮಾನತ್ತುಪಡಿಸಿಕೊಂಡಿರುವ ಕುರಿತು ಉಲ್ಲೇಖ ಇದೆಯಾ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ನಾನು ಮಹಜರನ್ನು ಓದಿ ಸಹಿ ಮಾಡಿರುತ್ತೇನೆ. ನಿಪಿ.2 ರ ಮಹಜರಿನಲ್ಲಿ ಪಂಚರ ಸಮಕ್ಷಮ ಮಧ್ಯದ ಪೌಚುಗಳನ್ನು ತೆಗೆದು ಪರಿಶೀಲಿಸಿ ನಂತರ ರಾಸಾಯನಿಕ ಪರೀಕ್ಷೆಗಾಗಿ ಅಮಾನತ್ತುಪಡಿಸಿಕೊಂಡಿರುವ ಕುರಿತು ನಮೂದು ಇದ್ದದ್ದನ್ನು ಓದಿ ಸಹಿ ಮಾಡಿದ್ದೇನೆ.

5. ಮಹಜರಿನ ಕಾಲಕ್ಕೆ ಮಧ್ಯದ ಪೌಚುಗಳನ್ನು ಬಾಕ್ಸ್‌ಗಳಿಂದ ತೆಗೆದು ಪರಿಶೀಲಿಸಿ ಆನಂತರ ರಾಸಾಯನಿಕ ಪರೀಕ್ಷಾ ವರದಿಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ನಾಲ್ಕು ಜನ ಆರೋಪಿತರನ್ನು ಅಮಾನತ್ತುಪಡಿಸಿಕೊಂಡ ಮಧ್ಯದ ಪೌಚುಗಳ ಕುರಿತು ವಿಚಾರಣೆ ಮಾಡಿದಾಗ ಸದರಿ ಮಧ್ಯದ ಪೌಚುಗಳನ್ನು ದೊಡ್ಡ ಉಳ್ಳಾರ್ತಿ ಗ್ರಾಮದಿಂದ ತಂದಿರುವುದಾಗಿ ತಿಳಿಯಿತು. ಈ ಕುರಿತು ನಾನು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿಲ್ಲ. ದಿನಾಂಕ 21.04.2020 ರಂದು ಬೆಳಗ್ಗೆ 5 ಗಂಟೆ ಸಮಯದಲ್ಲಿ ನಾನು ಚಾಸಾ.1 ರವರೊಂದಿಗೆ ಗಸ್ತು ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದಿನದಂದು ಕೆ.ಎ.16/ಜಿ.591 ರ ಆಂಬುಲೆನ್ಸ್‌ನಿಂದ ಮಾರುತಿ ಓಮಿನಿ ಕಾರಿಗೆ ಯಾವುದೇ ಮಧ್ಯದ ಪೌಚುಗಳನ್ನು ಹಸ್ತಾಂತರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಸಮಯದಲ್ಲಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆದಾಗ್ಯೂ ಚಾಸಾ.1 ರವರು ನನ್ನ ಮೇಲಾಧಿಕಾರಿಯಾದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಛಾಯಾಚಿತ್ರಗಳಲ್ಲಿ ಇರುವಂತಹ ಬಾಕ್ಸುಗಳಲ್ಲಿ ಯಾವುದೇ ಮಧ್ಯದ ಪೌಚುಗಳು ಇಲ್ಲ ಎಂದರೆ ಸರಿಯಲ್ಲ. 4 ನೇ ಆರೋಪಿತನು ಸದರಿ ದಿನದಂದು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಈ ಪ್ರಕರಣದ ಸಲುವಾಗಿ ಆತನನ್ನು ಸೇರಿಸಲಾಗಿದೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : 5 ನೇ ಆರೋಪಿ ಪರ ಶ್ರೀ ಯು.ಎಸ್. ವಕೀಲರಿಂದಃ</u>**

ಈ ಪ್ರಕರಣದ 5 ನೇ ಆರೋಪಿಯನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. 5 ನೇ ಆರೋಪಿ ಸ್ಥಳದಲ್ಲಿ ಇರಲಿಲ್ಲ.

**<u>ಪಾಟೀ ಸವಾಲು : 3 ನೇ ಆರೋಪಿ ಪರ ಶ್ರೀ ಬಿ.ಹೆಚ್.ಪಿ. ವಕೀಲರಿಂದಃ</u>**

ಚಾಸಾ.2 ಮತ್ತು 3 ರವರು ತರಕಾರಿ ತರಲು ಹೊಳಲ್ಕೆರೆಗೆ ಬೈಕಿನಲ್ಲಿ ಹೋಗುತ್ತಿದ್ದು, ಆಗ ನಾವು ಅವರನ್ನು ಕರೆದಿರುತ್ತೇವೆ. ಚಾಸಾ.2 ಮತ್ತು 3 ರವರು ಚಿತ್ರಹಳ್ಳೀ ಗೇಟಿನವರಾಗಿದ್ದು, ಮಹಜರಿನ ಕಾಲಕ್ಕೆ ಅವರು ಉಪಸ್ಥಿತರಿಲ್ಲದಿದ್ದಾಗ್ಯೂ ಠಾಣೆಯಲ್ಲಿ ಅವರನ್ನು ಕರೆಸಿಕೊಂಡು ಮಹಜರಿಗೆ ಸಹಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : 1 ಮತ್ತು 2 ನೇ ಆರೋಪಿತರ ಪರ ಶ್ರೀ ಎನ್.ಪಿ.ಹೆಚ್. ವಕೀಲರಿಂದಃ</u>**

1 ಮತ್ತು 2 ನೇ ಆರೋಪಿತರಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದಾಗ್ಯೂ, ಸದರಿರವರನ್ನು ಈ ಪ್ರಕರಣದಲ್ಲಿ ಸೇರ್ಪಡೆ ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ